# ಧರ್ಮಗಳ ಐಕಮತ್ಯ

ಕಳೆದ 200-250 ವರ್ಷಗಳಲ್ಲಿ ವಿಜ್ಞಾನದ ಸಾಧನೆ ಅಸೀಮವಾದುದು, ಅದೊಂದು ಅತ್ಯಾಶ್ಚರ್ಯಗಳ ಅಸದೃಶ ಲೋಕ, ಮನುಷ್ಯನ ಜೀವನ ವಿಧಾನವನ್ನು ಸಮಗ್ರವಾಗಿ ಬದಲಾಯಿಸಿಬಿಟ್ಟಿದೆ. ಪ್ರಕೃತಿಯಲ್ಲಿ ಸಹಜವಾಗಿ ಉಪಭೋಗಕ್ಕೆ ಲಭ್ಯವಾಗುತ್ತಿದ್ದ ಗಾಳಿ, ನೀರು ಬೆಳಕುಗಳನ್ನು ಸಹ ಮನುಷ್ಯ ಯಂತ್ರಗಳಿಗೆ ಅಳವಡಿಸಿ ಸಂಸ್ಕರಿಸುತ್ತಿದ್ದಾನೆ. ಬೇಕೆಂದಾಗ ಎಲ್ಲೆಂದರಲ್ಲಿ ಬ್ರಹ್ಮಾಂಡದ ಅಂಗಳದಲ್ಲಿಯೂ ಸಹ ಬಳಸಿಕೊಳ್ಳಬಲ್ಲ ಶಕ್ತಿಯನ್ನು ಗಳಿಸಿಕೊಂಡಿದ್ದಾನೆ. ಐಹಿಕ ಬದುಕನ್ನು ಸುಖಮಯಗೊಳಿಸಿಕೊಳ್ಳಲು ಅದನ್ನು ಶೀಘ್ರವಾಗಿ ಪಡೆಯಲು ಹಲವು ಸಾಧನಗಳನ್ನು ಕಂಡುಹಿಡಿದಿದ್ದಾನೆ. ಮನೋಲೋಕ ವಸ್ತುಲೋಕವನ್ನು ಅನ್ವೇಷಿಸಿ ಅನಾವರಣಗೊಳಿಸಿದೆ. ವಸ್ತುಲೋಕ ಮನೋಲೋಕವನ್ನು ಚಿಂತನೆಗೆ ಹಚ್ಚಿ ವಿಸ್ತರಿಸಿದೆ. ಇವೆಲ್ಲವೂ ಸಂಭವಿಸಿರುವುದು ಭೌತಿಕ ಒಳಿತಿಗೆ ಎಂಬುದು ಸತ್ಯ. ಆದರೆ ಮನುಷ್ಯ ಸುಖವಾಗಿದ್ದಾನೆಯೆ? ದು:ಖ ಮತ್ತು ಭಯದಿಂದ ಮುಕ್ತನಾಗಿದ್ದಾನೆಯೇ? ಇಲ್ಲ ಎಂಬುದೇ ಉತ್ತರವಾಗಿದೆ. ಜನಾಂಗ, ಬಣ್ಣ, ಧರ್ಮ ದೇಶ ಮುಂತಾದವುಗಳಲ್ಲಿ ಹರಿದು ಹಂಚಿಹೋಗಿರುವ ಮನುಷ್ಯ ತನ್ನ ನೆರೆಹೊರೆಯನ್ನು ಪ್ರೀತಿಸುವ ಪರಿಸ್ಥಿತಿಯಲ್ಲಿಲ್ಲವೆಂದು ತೋರುತ್ತದೆ. ಎರಡು ಸಾವಿರ ವರ್ಷಗಳ ಹಿಂದೆ ಇದ್ದು ಹೋದ ದೇವಮಾನವನೊಬ್ಬ ನೀನು ನಿನ್ನನ್ನು ಪ್ರೀತಿಸುವಂತೆಯೇ ನಿನ್ನ ನೆರೆಹೊರೆಯವರನ್ನು ಪ್ರೀತಿಸು ಎಂದು ಹೇಳಿದ. ಎಂಥ ಅದ್ಭುತವಾದ ಸಂದೇಶ ಅದು. ಇತರರೂ ನಮ್ಮಂತೆಯೇ ಎಂದು ತಿಳಿದರೆ ನಮಗೆ ಶತ್ರುಗಳೇ ಇರುವುದಿಲ್ಲ. ಬುದ್ಧನ ಮೈತ್ರಿಭಾವ ಈ ಜಗತ್ತನ್ನು ಒಂದೇ ಸೂತ್ರದಲ್ಲಿ ಹೆಣೆಯುತ್ತದೆ. ಈ ಲೋಕ ನನ್ನದು ನಾನೇ ಈ ಲೋಕ ಎಂದು ತಿಳಿದಾಗ ದ್ವೇಷಕ್ಕೆ ಈ ಲೋಕದಲ್ಲಿ ಜಾಗವೇ ಇರುವುದಿಲ್ಲ. ಜಗತ್ತಿನ ಎಲ್ಲ ಧರ್ಮಗಳು ಈ ಸಂದೇಶವನ್ನು ಒಂದಲ್ಲಾ ಒಂದು ರೀತಿಯಲ್ಲಿ ಒಳಗೊಂಡಿವೆ. ಮನುಷ್ಯ ಅದನ್ನು ಪೂಜಾವಿಧಿಯಂತೆ ಪಠಿಸುತ್ತಾನೆ ಕೂಡ. ಈ ಮೈತ್ರಿ ಭಾವ ಅತನಿಗೆ ಕಂಠಸ್ಥವಾಗಿದೆ. ಆದರೆ ಅದನ್ನು ಪಾಲಿಸಲು ಸಾಧ್ಯವಾಗುತ್ತಿಲ್ಲವೇಕೆ?

ಯೂರೋಪಿನ ಪುನರುತ್ಥಾನದ ಚರಿತ್ರೆ ಧಾರ್ಮಿಕ ವಿಭಜನೆಯಿಂದಲೇ ಪ್ರಾರಂಭವಾಗುತ್ತದೆ. ಕೆಥೋಲಿಕರು ಮತ್ತು ಪ್ರಾಟೆಸ್ಟೆಂಟರು ಹಾಗೂ ಪ್ರಾಟೆಸ್ಟೆಂಟರೊಳಗೆ ವಿಭಜಿತ ಗುಂಪುಗಳು ತಮ್ಮೊಳಗೆ ಬಡಿದಾಡಿಕೊಂಡು ಛಿದ್ರಗೊಳ್ಳುತ್ತಾರೆ. ಇದಕ್ಕೆ ಕಾರಣ ಧಾರ್ಮಿಕ ಸಂದೇಶಗಳ ತಪ್ಪು ಗ್ರಹಿಕೆ. ಯಾರು ನನ್ನೊಡನಿಲ್ಲವೋ ಅವನು ನನ್ನ ವಿರುದ್ಧವಿದ್ದಾನೆ ಎಂದು ತಿಳಿಯುವುದು ಅಥವಾ ಯಾರು ನನ್ನ ವಿರುದ್ಧವಿದ್ದಾನೆಯೋ ಅವನು ನನ್ನೊಡನಿಲ್ಲ ಎಂದು ತಿಳಿದುಕೊಳ್ಳುವುದು ದಾರಿ ತಪ್ಪಿಸುವ ಗ್ರಹಿಕೆಗಳಾಗಬಹುದು. ತಾನೊಬ್ಬ ಅತ್ಯುತ್ತಮ ಕ್ರೈಸ್ತನೆಂದು ಹೇಳಿಕೊಂಡ ಫ್ರಾನ್ಸಿಸ್ ಬೇಕನ್ ಈ ಮೇಲಿನ ಮಾತುಗಳನ್ನು ತನ್ನದೇ ರೀತಿಯಲ್ಲಿ ವಿಮರ್ಶಿಸಿದ್ದಾನೆ. ಧಾರ್ಮಿಕ ಒಗ್ಗಟ್ಟಿನ ನೆಪದಲ್ಲಿ ಖಡ್ಗವನ್ನು ಬಳಸುವುದನ್ನು ಬೇಕನ್ ಖಂಡಿಸುತ್ತಾನೆ. ಅದನ್ನು ಅಧ್ಯಾತ್ಮಿಕ ಮತ್ತು ಪ್ರಾಪಂಚಿಕ ಖಡ್ಗಗಳೆಂದು ಅವನು ವಿಂಗಡಿಸುತ್ತಾನೆ. ಧಾರ್ಮಿಕ ವ್ಯಕ್ತಿಗಳು, ಪ್ರವಚನಕಾರರು ಧರ್ಮ ಪ್ರಚಾರಕ್ಕಾಗಿ ಮೃದು ಮಾತುಗಳನ್ನಾಡುವುದು ಸಹ ಅವನ ಪ್ರಕಾರ ಖಡ್ಗವನ್ನು ಬಳಸಿದಂತೆಯೆ. ಎಲ್ಲಿ ಚರ್ಚುಗಳು ಸೋಲುತ್ತವೋ ಅಲ್ಲಿ ರಾಜರು ಚರ್ಚುಗಳ ಪರವಾಗಿ ಖಡ್ಗ ಹಿಡಿಯುತ್ತಿದ್ದರು, ಅದು ಪ್ರಾಪಂಚಿಕ ಖಡ್ಗ. ಈಗ ರಾಜರುಗಳಿಲ್ಲ. ಅವರ ಜಾಗದಲ್ಲಿ ಧಾರ್ಮಿಕ ಭಯೋತ್ಪಾದಕರಿದ್ದಾರೆ. ಇವರು ಜನರನ್ನು ಒಗ್ಗೂಡಿಸಲು ಅಥವಾ ದೇಶ ದೇಶಗಳ ನಡುವೆ, ಮನಸ್ಸು ಮನಸ್ಸುಗಳ ನಡುವೆ ಪ್ರೀತಿಯನ್ನು ಬೆಸೆಯಲು ಧರ್ಮವನ್ನು ಬಳಸಿಕೊಳ್ಳುವವರಲ್ಲ. 'ನೀನು ನನ್ನಂತೆ ಇಲ್ಲ, ಆದ್ದರಿಂದ ನೀನು ನನ್ನ ಶತ್ರು' ಎಂಬ ಧೋರಣೆ ಅವರದು. ಇದು ಅತ್ಯಂತ ಅಪಾಯಕಾರಿ ಧೋರಣೆ. ಈ ಅಖಂಡವಾದ ಭೂಮಿಯಲ್ಲಿ ಭಿನ್ನ ಭಿನ್ನ ಜನಾಂಗಗಳು ಭಿನ್ನ ಭಿನ್ನ ಬಣ್ಣ, ಭಾಷೆಗಳಿರುವಂತೆಯೇ ಭಿನ್ನ ಭಿನ್ನ ಆಲೋಚನೆಗಳು ಬೆಳೆದುಬಂದಿವೆ. ಅದು ಇನ್ನೊಬ್ಬರಿಗೆ ನೋವುಂಟುಮಾಡದಂತಿದ್ದರೆ ಅದನ್ನು ನಾವು ಸಹಿಸಬೇಕಾಗುತ್ತದೆ, ಗೌರವಿಸಬೇಕಾಗುತ್ತದೆ. ಹಾಗಾದಾಗಲೇ ಸಹ ಅಸ್ತಿತ್ವ, Co-existence ಸಾಧ್ಯವಾಗುತ್ತದೆ.

ರಕ್ತಪಾತಕ್ಕೆ ದೇವರನ್ನು ಬಳಸಿಕೊಳ್ಳುವುದು ಸರ್ವತ್ರ ಮಹಾಪಾಪ. ಏನೂ ಅರಿಯದ ಮುಗ್ಧರನ್ನು ಕೊಲ್ಲುವುದು, ಅಮಾಯಕ ಕುಟುಂಬಗಳನ್ನು ನಾಶ ಮಾಡುವುದು, ಹೆತ್ತವರಿಂದ ಮಕ್ಕಳನ್ನು, ಮಕ್ಕಳಿಂದ ತಂದೆ ತಾಯಿಗಳನ್ನೂ ದೂರ ಮಾಡುವುದು, ವ್ಯವಸ್ಥೆಯನ್ನು ದಿಕ್ಕೆಡಿಸುವುದು, ಸಾರ್ವಜನಿಕ ಆಸ್ತಿಯನ್ನು ಹಾಳುಗೆಡುವುದು, ಇಷ್ಟೆಲ್ಲ ನರಕವನ್ನು ಸೃಷ್ಟಿಸಿ ಧರ್ಮನಿಷ್ಠನೆಂಬ ಭ್ರಮೆಯಲ್ಲಿ ಸಾಯುವುದು, ಆಮೇಲೆ ಸ್ವರ್ಗ ಸಿಗುತ್ತದೆ ಎಂದು ನಂಬುವುದು. ಈ ಮೂರ್ಖತನ ಪರಿಪಾಲನೆಯಲ್ಲಿರುವ ಇಂಥವರನ್ನು ದೇವರು ಎಂದೂ ಕ್ಷಮಿಸಲಾರ.

■ ಮೂಚಿ

## ಮಾತೇ ಮುತ್ತು

★ ಸಮಸ್ಯೆ ಎದುರಾಯಿತೆಂದರೆ, ಅತ್ಯುತ್ತಮವಾದುದನ್ನು ಸಾಧಿಸಲು ಅವಕಾಶ ಸಿಕ್ಕಿತೆಂದೇ ಅರ್ಥ.

-ಡ್ಯೂಕ್ ಎಲಿಂಗ್ಟನ್

★ ಜತೆಗೂಡುವುದರಿಂದ ಆರಂಭ. ಒಟ್ಟಿಗೆ ಇರುವುದರಿಂದ ಪ್ರಗತಿ. ಜತೆಯಾಗಿ ಕೆಲಸ ಮಾಡುವುದರಿಂದ ಯಶಸ್ಸು.

-ಹೆನ್ರಿ ಫೋರ್ಡ್

★ ಈ ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ; ನಮ್ಮ ಕಷ್ಟಗಳೂ ಕೂಡಾ!

-ಚಾರ್ಲಿ ಚಾಪ್ಲಿನ್

★ ಹಣ ಇನ್ನೊಬ್ಬನಿಗೆ ಒಳಿತನ್ನು ಮಾಡಲು ನೆರವಾದರೆ ಅದಕ್ಕೆ ಬೆಲೆ ಇದೆ. ಇಲ್ಲವಾದಲ್ಲಿ ಅದರಿಂದ ಆದಷ್ಟು ಬೇಗ ದೂರವಾಗು.

-ಸ್ವಾಮಿ ವಿವೇಕಾನಂದ

★ ಮುಗುಳ್ನಗೆಯೊಂದಿಗೆ ಪರಸ್ಪರ ಭೇಟಿಯಾಗಿ. ಅದುವೇ ಪ್ರೇಮದ ಆರಂಭ.

-ಮದರ್ ತೆರೇಸಾ

★ ಯಶಸ್ಸೇ ಅಂತಿಮ ಅಲ್ಲ. ವೈಫಲ್ಯ ಮಾರಕವೂ ಅಲ್ಲ. ಮುಂದುವರಿಯುವ ಧೈರ್ಯವೇ ಎಲ್ಲಕ್ಕಿಂತ ಮುಖ್ಯ.

-ವಿನ್‌ಸ್ಟನ್ ಚರ್ಚಿಲ್

★ ಪ್ರೀತಿ ಮತ್ತು ಕೌಶಲ ಒಟ್ಟಿಗೆ ಕೆಲಸ ಮಾಡಿದರೆ ಅದ್ಭುತ ಕಲಾಕೃತಿ ನಿರ್ಮಾಣವಾಗುತ್ತದೆ.

-ಜಾನ್ ರಸ್ಕಿನ್

★ ನಿನ್ನನ್ನು ನೀನು ಕಂಡುಕೊಳ್ಳಲು ಅತ್ಯುತ್ತಮ ಮಾರ್ಗವೆಂದರೆ ಇತರರ ಸೇವೆಯಲ್ಲಿ ತೊಡಗಿಕೊಳ್ಳುವುದು.

-ಮಹಾತ್ಮ ಗಾಂಧೀಜಿ

★ ಸಂತೋಷಕ್ಕೆ ಯಶಸ್ಸೇ ಮುಖ್ಯವಲ್ಲ. ಯಶಸ್ಸಿಗೆ ಸಂತೋಷ ಮುಖ್ಯ. ನೀವು ಮಾಡುವ ಕೆಲಸವನ್ನು ಪ್ರೀತಿಸಿದರೆ ಖಂಡಿತ ಯಶಸ್ವಿ ಆಗುತ್ತೀರಿ.

-ಆಲ್ಬರ್ಟ್ ಸ್ವಿಟ್ಜರ್

★ ಪ್ರೀತಿಯೆಂದರೆ ನೀವು ಹುಡುಕಾಡುವುದಲ್ಲ, ಅದೇ ಹುಡುಕಿಕೊಂಡು ಬರುವುದು.

-ಲಾರೆಟ್ಟಾ ಯಂಗ್

★ ಅಜ್ಞಾನ ಮತ್ತು ಆತ್ಮವಿಶ್ವಾಸ ಎರಡಿದ್ದರೆ ಸಾಕು, ಯಶಸ್ಸು ನಿನ್ನನ್ನು ಹುಡುಕಿಕೊಂಡು ಬರುತ್ತದೆ.

-ಮಾರ್ಕ್ ಟ್ವೈನ್

★ ನಿಮ್ಮ ಎಲ್ಲ ಆಯ್ಕೆಗಳ ಒಟ್ಟು ಮೊತ್ತವೇ ಜೀವನ.

-ಆಲ್ಬರ್ಟ್ ಕಾಮೂ

★ ನಾವೆಲ್ಲರೂ ಕೊಳಚೆಯಲ್ಲಿದ್ದೇವೆ. ಆದರೆ ನಮ್ಮಲ್ಲಿ ಕೆಲವರು ಮಾತ್ರ ನಕ್ಷತ್ರಗಳತ್ತ ನೋಡುತ್ತಿದ್ದಾರೆ.

-ಆಸ್ಕರ್ ವೈಲ್ಡ್

★ ಜ್ಞಾನಪೂರ್ಣ ಮನುಷ್ಯನಿಗೆ ತನ್ನ ವೈರಿಗಳನ್ನು ಪ್ರೀತಿಸುವುದೂ ಗೊತ್ತು; ಸ್ನೇಹಿತರನ್ನು ದ್ವೇಷಿಸುವುದೂ ಗೊತ್ತು.

-ಫ್ರೆಡ್ರಿಕ್ ನೀಟ್ಸೆ